**SC No. 149/2025**
**PW-1**
**CW-1**

ದಿನಾಂಕ : 02.09.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು.

ಪಾಟೀ ಸವಾಲುಃ 1ನೇ ಆರೋಪಿತರ ಪರವಾಗಿಃ ಶ್ರೀ. ಸಿ. ಎ. ಟಿ. ವಕೀಲರಿಂದಃ

5. ನಾನು ಕಾನೂನು ಪದವೀಧರನಲ್ಲ. ನಿ.ಪಿ.1 ಪಿರ್ಯಾದಿಯಲ್ಲಿ ಕೆಲವು ಕಾಯ್ದೆಯ ಕಲಂಗಳನ್ನು ನಾನೇ ಹೇಳಿ ಬರೆಸಿದ್ದೆನು. ದಿ.08.06.2024 ರಂದು ಸಂಜೆ 06.00 ರಿಂದ 08.00 ಗಂಟೆಯ ಅವಧಿಯ ನಡುವೆ ಮಹಾಂತೇಶ ಭಜಂತ್ರಿಯವರು ನನಗೆ ಫೋನ ಮಾಡಿ ಮಗು ಮಾರಾಟ ಮಾಡಲು ಬರುತ್ತಿದ್ದಾರೆ ಎನ್ನುವ ವಿಚಾರವನ್ನು ತಿಳಿಸಿದ್ದರು. ಈ ಮಾಹಿತಿ ಬಂದ ನಂತರ ನಾವು ಏನೆನು ಮಾಡಬೇಕು ಮತ್ತು ಯಾರೆಲ್ಲಾ ಯಾವ ರೀತಿ ನಟಿಸಬೇಕು ಎನ್ನುವ ಬಗ್ಗೆ ಎಲ್ಲಾ ಮಾಹಿತಿಯನ್ನು ಮಹಾಂತೇಶ ಭಜಂತ್ರಿಯವರು ತಿಳಿಸಿದ್ದರು. ಈ ಎಲ್ಲಾ ಮಾಹಿತಿಯನ್ನು ಮಹಾಂತೇಶ ಭಜಂತ್ರಿಯವರು ನನಗೆ ಫೋನ ಮೂಲಕ ತಿಳಿಸಿದ್ದು ಆ ದಿನ ನಾವು ಎಲ್ಲೂ ಒಟ್ಟಾಗಿ ಸೇರಿ ಈ ಬಗ್ಗೆ ಚರ್ಚಿಸಿರಲಿಲ್ಲ. ಈ ವಿಚಾರವನ್ನು ನಾನು ಆ ರಾತ್ರಿ ಮಾಳಮಾರುತಿ ಪೋ.ಠಾಣೆಗೆ ತಿಳಿಸಿಲ್ಲ. ಈ ವಿಚಾರವನ್ನು ನಮ್ಮ ಕಚೇರಿಯ ಯಾವ ಸಿಬ್ಬಂದಿ ಮಾಳಮಾರುತಿ ಪೋ.ಠಾಣೆಗೆ ತಿಳಿಸಿದ್ದರು ಮತ್ತು ಏನೆಲ್ಲಾ ತಿಳಿಸಿದ್ದರು ಎನ್ನುವ ಬಗ್ಗೆ ನನಗೆ ವೈಯಕ್ತಿ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಪುನಃ ನಮ್ಮ ಡಿಸಿಪಿಓ ರವರು ಮಾಳಮಾರುತಿ ಪೋ. ಠಾಣೆಗೆ ತಿಳಿಸಿದ್ದರು. ಅವರು ಮಾಳಮಾರುತಿ ಪೋ.ಠಾಣೆಗೆ ಫೋನ ಮೂಲಕ ತಿಳಿಸಿದ್ದು ಲಿಖಿತವಾಗಿ ತಿಳಿಸಿರಲಿಲ್ಲ.

6. ಪಿರ್ಯಾದಿ ಕೊಡುವ ಮೊದಲು ನಾನು ಮಾಳಮಾರುತಿ ಪೋಲಿಸರಿಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಚಾಸಾ 27 ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿಲ್ಲ. ಪೋ.ಠಾಣೆಗೆ ಹೋಗುವ ಮೊದಲು ನಾನು ಚಾಸಾ 27 ರವರೊಂದಿಗೆ ವೈಯಕ್ತಿಕವಾಗಿ ಸಂಪರ್ಕಿಸಿಲ್ಲ. ಚಾಸಾ 27 ರವರಿಗೆ ನಿಸರ್ಗ ಧಾಬಾದ ಬಳಿ ಬರಲು ಡಿಸಿಪಿಓ ರವರು ಹೇಳಿದ್ದರು ಎಂದು ನಾನು ಹೇಳುತ್ತೇನೆ. ಕಾನೂನು

ಬಾಹಿರವಾಗಿ ಮಕ್ಕಳ ದತ್ತಕ ಪ್ರಕ್ರಿಯೆ ನಡೆದಲ್ಲಿ ನಮ್ಮ ಇಲಾಖೆಯ ಮೂಲಕ ನಾವು ಕ್ರಮ ತೆಗೆದುಕೊಳ್ಳುತ್ತೇವೆ. 8ನೇ ತಾರೀಖಿನಂದು ಡಿಸಿಪಿಓ ರವರು ನನಗೆ ಫೋನ ಮಾಡಿ 9ನೇ ತಾರೀಖಿನಂದು ಒಂದು ಮಗುವಿನ ಕಾನೂನು ಬಾಹಿರ ದತ್ತಕ ಪ್ರಕ್ರಿಯೆ ನಡೆಯಲಿದೆ ಮತ್ತು ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ಹೇಳಿದ್ದರು. ನಿಸರ್ಗ ಧಾಬಾದ ಬಳಿ ನಾವು ಹೋಗುವವರೆಗೆ ಚಾಸಾ 27 ರವರು ನನ್ನನ್ನು ಸ್ವತಃ ಭೇಟಿಯಾಗಿಲ್ಲ. ಮಗುವನ್ನು ಕೊಡುವ ಬಗ್ಗೆ ಚಾಸಾ 27 ಮತ್ತು ಮಗುವನ್ನು ಕೊಡುವವರ ನಡುವೆ ಏನೆಲ್ಲಾ ಮಾತುಕತೆ ಆಗಿತ್ತು ಎನ್ನುವ ಬಗ್ಗೆ ನನಗೆ ಸ್ವಂತ ಮಾಹಿತಿ ಇಲ್ಲ.

7. ದಿ. 09.06.2024 ರಂದು ಬೆಳಿಗ್ಗೆ 05.30 ರಿಂದ 06.00ಗಂಟೆ ಸಮಯದಲ್ಲಿ ನಾನು ನಿಸರ್ಗ ಧಾಬಾದ ಬಳಿ ಹೋಗಿದ್ದೆನು. ನಿಸರ್ಗ ಧಾಬಾದ ಬಳಿ ಹೋಗುವ ಮೊದಲು ನಾವು ಬೇರೆ ಕಡೆ ಎಲ್ಲೂ ಕೂಡಿ ಮಾತುಕತೆ ಮಾಡಿಕೊಂಡಿರಲಿಲ್ಲ. ನಿಸರ್ಗ ಧಾಬಾದ ಬಳಿ ನಾನು ಹೋಗಬೇಕು ಎಂದು ನನಗೆ ಡಿಸಿಪಿಓ ರವರು ತಿಳಿಸಿದ್ದರು. ಸಾಕ್ಷಿ ಡಿಸಿಪಿಓ ರವರು ಅಲ್ಲಿಗೆ ಮಾಹಾದೇವಿ ಜೈನರವರು ಬರುತ್ತಿದ್ದಾರೆ ಎಂದು ಕೂಡ ಹೇಳಿದ್ದರು ಎನ್ನುತ್ತಾರೆ. ನಾನು, ಚಾಸಾ 24, ಚಾಸಾ 26, ಚಾಸಾ 25, ಚಾಸಾ 23, ಚಾಸಾ 27 ಮತ್ತು ಪೋಲಿಸರು ಸೇರಿ ನಿಸರ್ಗ ಧಾಬಾದ ಬಳಿ ಹೋಗಿದ್ದೆವು. ನಾವು ಹಿಂದೆ ಮುಂದೆಯಾಗಿ ಆ ಸ್ಥಳಕ್ಕೆ ಸೇರಿದ್ದೆವು. ಆ ಜಾಗಾದಲ್ಲಿ ನಾವು ಸುಮಾರು 15-20 ನಿಮಿಷಗಳ ಕಾಲ ಇದ್ದೆವು. ನಾವು ಅಲ್ಲಿಗೆ ಹೋದ ಸುಮಾರು 10-15 ನಿಮಿಷಗಳಲ್ಲಿ ಕಾರು ಆ ಸ್ಥಳಕ್ಕೆ ಬಂದಿತ್ತು. ಮಹಾದೇವಿ ಜೈನರ ಮತ್ತು ಚಾಸಾ 24 ಮತ್ತು 27ರವರ ನಡುವೆ ಆದಂತಹ ಮಾತುಕತೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರಲಿಲ್ಲ ಮತ್ತು ನಾನು ಅವರ ಹತ್ತಿರ ಆಗ ಇದ್ದಿರಲಿಲ್ಲ. 1ನೇ ಆರೋಪಿಯು ಆ ಮಗುವನ್ನು 50 ರಿಂದ 60 ಸಾವಿರ ರೂ.ಗೆ ಖರೀದಿ ಮಾಡಿದ್ದಳು ಎನ್ನುವ ವಿಚಾರ ನನಗೆ ಪೋ.ಠಾಣೆಗೆ ಹೋದ ನಂತರ ತಿಳಿಯಿತು. ನಿಸರ್ಗ ಧಾಬಾದ ಬಳಿ ಈ ಘಟನೆ ನಡೆದಾಗ ಅಕ್ಕಪಕ್ಕದವರು ಮತ್ತು ಅಲ್ಲಿ ವಾಕಿಂಗ್ ಮಾಡುವವರು ಯಾರೂ ಕೂಡ

ಅಲ್ಲಿ ಇರಲಿಲ್ಲ. ನಿಸರ್ಗ ಧಾಬಾದ ಬಳಿ ನಾವು ಹೋಗುವಾಗ ನಮ್ಮೊಂದಿಗೆ ಇಬ್ಬರು ಪೋಲಿಸರು ಇದ್ದು ಅವರನ್ನು ಹೊರತುಪಡಿಸಿ ಬೇರೆ ಯಾರೂ ಪೋಲಿಸರು ಅಲ್ಲಿಗೆ ಬಂದಿರಲಿಲ್ಲ. ಆ ಜಾಗಾದಲ್ಲಿ ಆ ಮಗುವಿನ ನಿಜವಾದ ತಂದೆ ತಾಯಿ ಇದ್ದರೋ ಇಲ್ಲವೋ ಎಂದು ನಾನು ವಿಚಾರ ಮಾಡಿಲ್ಲ. ನಿಸರ್ಗ ಧಾಬಾದಿಂದ ಸುಮಾರು 500 ಮೀ. ದೂರದಲ್ಲಿ ಕೆ ಎಲ್ ಇ ಆಸ್ಪತ್ರೆ ಇದೆ ಎನ್ನುವುದು ನಿಜ.

8. ನಾವು ನೋಡಿದಂತ ಆ ಮಗು ಆಗ ಆರೋಗ್ಯವಾಗಿತ್ತೋ ಅಥವಾ ಇಲ್ಲವೋ ಎಂದು ನನಗೆ ಹೇಳಲಾಗುವುದಿಲ್ಲ. ಆ ಮಗುವನ್ನು ಅವರು ಮಾರಾಟ ಮಾಡುವ ಸಲುವಾಗಿ ತೆಗೆದುಕೊಂಡು ಬರುತ್ತಿದ್ದರು ಎಂದು ನಾನು ಹೇಳುತ್ತೇನೆ. ಆ ಮಗುವಿಗೆ ಆರೋಗ್ಯ ಸ್ಥಿತಿ ಚೆನ್ನಾಗಿಲ್ಲವಾದ್ದರಿಂದ ಅದನ್ನು ಕೆಎಲ್ಇ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಲು ಅವರು ತಂದಿದ್ದರು ಎನ್ನುವುದು ನಿಜವಲ್ಲ. ಕಾರು ಬಂದ ಕಾಲಕ್ಕೆ ಚಾಸಾ 24 ಮತ್ತು 27 ಒಟ್ಟಿಗೆ ನಿಂತಿದ್ದರು. ನಿಸರ್ಗ ಧಾಬಾದ ಬಳಿ ನಡೆದ ಘಟನೆಯ ಫೋಟೊ ತೆಗೆಯಲಾಗಿದೆ ಮತ್ತು ವಿಡಿಯೋ ಕೂಡ ಮಾಡಲಾಗಿದೆ ಎಂದು ನಾನು ಹೇಳುತ್ತೇನೆ. ನಮ್ಮ ಇಲಾಖೆಯವರು ಫೋಟೊವನ್ನು ತೆಗೆದಿದ್ದರು. ವಿಡಿಯೋವನ್ನು ಯಾರು ಮಾಡಿದ್ದರು ಎಂದು ನನಗೆ ನೆನಪಿಲ್ಲ.

9. ನಾವು ಪೋ.ಠಾಣೆಗೆ ಹೋದಾಗ ಬೆಳಿಗ್ಗೆ 06.20 ಗಂಟೆ ಆಗಿತ್ತು. ನಾವು ಠಾಣೆಗೆ ಹೋದಾಗ ಮಾಳಮಾರುತಿ ಪೋ.ಠಾಣೆಯಲ್ಲಿ ಸಿಪಿಐ ರವರು ಇದ್ದಿರಲಿಲ್ಲ. ಈ ಕೇಸಿನ ಬಗ್ಗೆ ಪೋ.ಠಾಣೆಯಲ್ಲಿ ಯಾರು ಯಾರಿಗೆ ಮಾಹಿತಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ ಆದರೆ ಡಿಸಿಪಿಓ ರವರು ಪೋಲಿಸರಿಗೆ ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತು. ನಾನು ಪೋಲಿಸರಿಗೆ ಖುದ್ದಾಗಿ ಪಿರ್ಯಾದಿಯನ್ನು ಕೊಟ್ಟಿದ್ದೆನು. ನಾವು ಠಾಣೆಗೆ ಹೋದ ನಂತರ ಎಷ್ಟು ಗಂಟೆಗೆ ಮತ್ತು ಎಷ್ಟು ಸಮಯದ ನಂತರ ಸಿಪಿಐ ರವರು ಠಾಣೆಗೆ ಬಂದಿದ್ದರು

ಎನ್ನುವುದು ನನಗೆ ನೆನಪಿಲ್ಲ. ನಾನು ಪಿರ್ಯಾದಿಯನ್ನು ಕೊಡುವಾಗ ಮಧ್ಯಾಹ್ನ 01.30 ಗಂಟೆ ಆಗಿತ್ತು. ಆ ದಿನ ಬೆಳಿಗ್ಗೆ ನಿಸರ್ಗ ಧಾಬಾದ ಬಳಿ ಘಟನೆ ಆದ ಬಗ್ಗೆ ಆಗ ಅಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿರಲಿಲ್ಲ.

10. ದಿ.08.06.2024ರಂದು ಶ್ರೀ ಮಹಾಂತೇಶ ಭಜಂತ್ರಿಯವರು ನನಗೆ ಕರೆ ಮಾಡಿ ದಿ.09.06.2024ರಂದು ಕಿತ್ತೂರಿನಿಂದ ಬೆಳಗಾವಿಗೆ 1 ತಿಂಗಳ ಮಗುವನ್ನು ಮಾರಾಟ ಮಾಡಲು ಬರುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆ ಬಳಿಕ ನಾವು ಚಾಸಾ 24 ರಿಂದ 27ರವರನ್ನು ಒಳಗೊಂಡ ಒಂದು ತಂಡವನ್ನು ರಚಿಸಿದ್ದೆವು ಮತ್ತು ಮಗುವನ್ನು ತೆಗೆದುಕೊಳ್ಳುವ ಬಗ್ಗೆ ನಟನೆ ಮಾಡುವಂತೆ ಚಾಸಾ 24 ಮತ್ತು 25 ರವರಿಗೆ ಕೇಳಿಕೊಂಡಿದ್ದೆನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಅದೇ ದಿನ ರಾತ್ರಿ ಚಾಸಾ 27ರವರು 1ನೇ ಆರೋಪಿಗೆ ಫೋನ ಮಾಡಿ ತಾನು ಆ ಮಗುವನ್ನು ರೂ.1,40,000/-ಕ್ಕೆ ಖರೀದಿ ಮಾಡಲು ಸಿದ್ದರಿರುವುದಾಗಿ ಹೇಳಿದ್ದರು ಮತ್ತು 1ನೇ ಆರೋಪಿಯು ಚಾಸಾ 27 ರವರಿಗೆ ಆಕೆ ಮತ್ತು ಆಕೆಯ ಗಂಡನೊಂದಿಗೆ ನಿಸರ್ಗ ಧಾಬಾದ ಬಳಿ ಬರಲು ಹೇಳಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

11. ಆ ಪ್ರಕಾರ ದಿ.09.06.2024ರಂದು ಬೆಳಿಗ್ಗೆ ನಾವು ಆ ಸ್ಥಳಕ್ಕೆ ಹೋಗಿದ್ದೆವು ಮತ್ತು ಅಲ್ಲಿ ಕೆಎ 22 ಎಮ್ ಸಿ 8906 ವಾಗನಾರ್ ಕಾರು ಬಂದಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. 1ನೇ ಆರೋಪಿಯು ಮೊದಲು ಹಣವನ್ನು ಕೊಡಬೇಕೂ ಮತ್ತು ಆ ಬಳಿಕ ಮಗು ಕೊಡುತ್ತೇನೆ ಎಂದು ಹೇಳಿದ್ದಳು ಮತ್ತು ಚಾಸಾ 24 ಮತ್ತು 27 ರವರು ಸೇರಿ 1ನೇ ಆರೋಪಿಯಿಂದ ಮಗುವನ್ನು ಪಡೆದುಕೊಂಡರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆ ಕಾಲಕ್ಕೆ ನಾವು ಮತ್ತು ಮಾಳ

ಮಾರುತಿ ಪೋಲಿಸರು ಹೋಗಿ ಮಗುವನ್ನು ಮತ್ತು ಆರೋಪಿಯನ್ನು ಹಿಡಿದು ಠಾಣೆಗೆ ಕರೆದುಕೊಂಡು ಬಂದಿದ್ದೆವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆಗ 1ನೇ ಆರೋಪಿಯೊಂದಿಗೆ ಆಕೆಯ ಮಗಳು ಇದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆ ಬಳಿಕ 1ನೇ ಆರೋಪಿಯನ್ನು ವಿಚಾರಿಸಿದಾಗ ಆಕೆ 50 ರಿಂದ 60 ಸಾವಿರ ರೂ.ಗೆ ಆ ಮಗುವನ್ನು ಖರೀದಿ ಮಾಡಿದ್ದರು ಎಂದು ಹೇಳಿದ್ದರು ಎಂದು ನಾನು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

12. ಆ ಬಳಿಕ ಮಧ್ಯಾಹ್ನ 2 ರಿಂದ 3 ಗಂಟೆಗೆ ನಾವು ಪುನಃ ನಿಸರ್ಗ ಧಾಬಾದ ಬಳಿ ಹೋಗಿದ್ದು ಅಲ್ಲಿ ಪಂಚನಾಮೆ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಮಗುವಿನ ತಂದೆ ತಾಯಿ ಮತ್ತು 1ನೇ ಆರೋಪಿ ಸೇರಿ ಆ ಮಗುವನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ನಮ್ಮ ಅಧಿಕಾರಿಗಳಿಗೆ ಬಂದ ಮಾಹಿತಿಯನ್ನು ತಪ್ಪಾಗಿ ಗ್ರಹಿಸಿ ನಾವು 1ನೇ ಆರೋಪಿ ಮತ್ತು ಆ ಮಗುವನ್ನು ನಮ್ಮ ವಶಕ್ಕೆ ಪಡೆದು ಆ ಪ್ರಕಾರ ನಾನು ಸುಳ್ಳು ಪಿರ್ಯಾದಿ ಕೊಟ್ಟಿದ್ದೆ ಎನ್ನುವುದು ನಿಜವಲ್ಲ. ನಾನು ಕೊಟ್ಟ ಸುಳ್ಳು ಪಿರ್ಯಾದಿಗೆ ಅನುಕೂಲವಾಗುವಂತೆ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆ ಘಟನೆಯ ಕಾಲಕ್ಕೆ ತೆಗೆದಂತ ಫೋಟೊ ಮತ್ತು ವಿಡಿಯೋವನ್ನು ನಾನು ಪಿರ್ಯಾದಿ ಕೊಡುವಾಗ ಮಾಳಮಾರುತಿ ಪೋಲಿಸರಿಗೆ ಕೊಟ್ಟಿರುತ್ತೇನೆ. ನಮ್ಮ ಕಚೇರಿಯ ಅಂಕಿ ಸಂಖ್ಯೆಗೋಸ್ಕರ ನಾವು ಇದೊಂದು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎನ್ನುವುದು ನಿಜವಲ್ಲ.

<u>ಪಾಟೀ ಸವಾಲುಃ ಇತರ ಆರೋಪಿತರ ಪರವಾಗಿಃ</u>

ಇತರ ಆರೋಪಿತರ ಪರ ವಕೀಲರು ತಾವು ಮೇಲಿನ ಪಾಟೀ ಸವಾಲನ್ನು ಅನುಸರಿಸುವುದಾಗಿ ಹೇಳುತ್ತಾರೆ.

**SC No. 149/2025**
**PW-1**
**CW-1**

ಮರು ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.